**ಇಂದು ದಿನಾಂಕ: 27.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಜಿ.ವಕೀಲರಿಂದಃ**

ನನ್ನ ತಂದೆ ದಾವಾ ಆಸ್ತಿಯನ್ನು ನೊಂದಣಿ ಮಾಡಿಸಿಕೊಳ್ಳುವ ಕಾಲಕ್ಕೆ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿದ್ದೆ. ಕ್ರಯ ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಖರೀದಿ ಮಾಡುವ ಮೊದಲು ನನ್ನ ತಂದೆ ಯಾರ ಜೊತೆ ವ್ಯವಹಾರ ಮಾಡಿದ್ದರು ಎಂದರೆ ಮೊಟೆಯಪ್ಪಗೌಡ, ಶೆಲ್ವಮ್ಮ ಮತ್ತು ಲಕ್ಷ್ಮೀರವರ ಜೊತೆ ವ್ಯವಹಾರ ಮಾಡಿದ್ದರು. ನನ್ನ ತಂದೆ ಜಯಮ್ಮನವರಿಂದ ಖರೀದಿಸಿದ್ದ ಆಸ್ತಿಗಳ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಂದೆ ಅದನ್ನು ಮಾರಾಟ ಮಾಡಿದ್ದಾರೆ. ನನ್ನ ತಂದೆಗೆ 1 ಎಕರೆ 30 ಗುಂಟೆ ದರಖಾಸ್ತು ಮೂಲಕ ಬಂದಿತ್ತು ಅದನ್ನು ಮಾರಾಟ ಮಾಡಿದ್ದಾರೆ. ನನ್ನ ತಂದೆ ವ್ಯವಸ್ಥಾ ಪತ್ರ ಬರೆದಿರುವುದು ಗೊತ್ತು. ನನ್ನ ತಂದೆ ರಾಜೇಗೌಡ, ಕಾಳೇಗೌಡ, ಧನುಷ ಮತ್ತು ಕಾರ್ತಿಕ ಇವರಿಗೆ ವ್ಯವಸ್ಥಾ ಪತ್ರ ಮಾಡಿಕೊಟ್ಟಿದ್ದಾರೆ.

ನಿ.ಡಿ–3 ರಲ್ಲಿ ಗುರುತಿಸಿರುವ ಎರಡು ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ಆ ಸಹಿಗಳನ್ನು ನನ್ನ ತಂದೆಯೇ ಮಾಡಿದ್ದಾರೆ. ನನ್ನ ತಂದೆ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿರುವ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರವನ್ನು ಮಾಡಲು ನಮ್ಮ ಕುಟುಂಬದ ಸದಸ್ಯರ ಸಮ್ಮತಿಯನ್ನು ಪಡೆದುಕೊಂಡಿಲ್ಲ. ನನಗೆ ಕಂಪಲಾಪುರದ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿಗೆ ವ್ಯವಸ್ಥಾ ಪತ್ರ ಮಾಡಿಲ್ಲ.

ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ಕಂಪಲಾಪುರದ ಆಸ್ತಿಗಳನ್ನು ಖರೀದಿ ಮಾಡಿ ವ್ಯವಸ್ಥಾ ಪತ್ರ ಮಾಡಲಾಗಿದೆ ಎಂದು ಬರೆಸಲಾಗಿದೆ. ಸಾಕ್ಷಿಗಳನ್ನು ನನ್ನ ತಂದೆ ಕರೆದುಕೊಂಡು ಬಂದಿದ್ದರು. ಅವರು ಯಾವ ಊರಿನವರು ಎಂದು ಗೊತ್ತಿಲ್ಲ. ಆ ವ್ಯಕ್ತಿಗಳು ಸಹಿ ಮಾಡಿ ಹೋಗುವಾಗ ನೋಡಿದ್ದೇನೆ. ಅವರು ಎಷ್ಟು ಕಡೆ ಸಹಿ ಮಾಡಿದ್ದಾರೆ ಎಂದು ಮರೆತುಹೋಗಿದೆ. ವ್ಯವಸ್ಥಾ ಪತ್ರದಲ್ಲಿರುವ ಒಕ್ಕಣೆಗಳನ್ನು ನನ್ನ ತಂದೆ ನಾಗರಾಜುರವರಿಗೆ ಹೇಳಿ ಬರೆಸಿದ್ದಾರೆ. ಆ ಸಮಯದಲ್ಲಿ ಭೂತನಹಳ್ಳಿಯಲ್ಲಿ ಮಾರಾಟ ಮಾಡಿದ್ದ ದಾಖಲೆ ಕೊಟ್ಟು ಬರೆಸಿದ್ದಾರೆ. ಭೂತನಹಳ್ಳಿಯಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಿ ಕಂಪಲಾಪುರದಲ್ಲಿ ನನ್ನ ತಂದೆ ಆಸ್ತಿ ಖರೀದಿ ಮಾಡಿದ್ದರು ಆ ರೀತಿ ಖರೀದಿ ಮಾಡಿದ ಆಸ್ತಿಗೆ ನನ್ನ ತಂದೆ ವ್ಯವಸ್ಥಾ ಪತ್ರ ಮಾಡಿದ್ದಾರೆ. ಭೂತನಹಳ್ಳಿ ದಾಖಲೆಗಳನ್ನು ಬಿಟ್ಟು ಬೇರೆ ದಾಖಲೆಗಳನ್ನು ತಂದಿರಲಿಲ್ಲ.

ನನ್ನ ತಂದೆ ಸಹಿ ಮಾಡುವುದನ್ನು ಮಾತ್ರ ಕಲಿತಿದ್ದರು ಎಂದರೆ ಇರಬಹುದು. ಸರ್ವೆ ನಂಬರ್ ಮತ್ತು ಅದರ ವಿಸ್ತೀರ್ಣವನ್ನು ನನ್ನ ತಂದೆಯೇ ಹೇಳಿ ಬರೆಸಿದ್ದಾರೆ. ನನ್ನ ತಂದೆಗೆ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹೇಳಲು ಗೊತ್ತಿತ್ತು. ನನ್ನ ತಂದೆಯೇ ಷೆಡ್ಯೂಲ್ ಹೇಳಿ ಬರೆಸಿದ್ದಾರೆ. ನನ್ನ ತಂದೆಯೇ ಹೇಳಿ ಬರೆಸಿದ್ದಾರೆ ಎಂಬುದನ್ನು ನೋಡಿರುವವರು ಯಾರಿದ್ದಾರೆ ಎಂದರೆ ನೆನಪು ಕಡಿಮೆಯಾಗಿದೆ. ಮಧ್ಯಾಹ್ನ 3.30 ಗಂಟೆಗೆ ಪತ್ರ ನೊಂದಣಿಯಾಗಿದೆ. ನನ್ನ ತಂದೆಗೆ ನಾನು ಹಣ ಕೊಟ್ಟಿಲ್ಲ. ಮುದ್ರಾಂಕ ಶುಲ್ಕವನ್ನು ನನ್ನ ತಂದೆಯೇ ಕೊಟ್ಟಿದ್ದಾರೆ.

ನನ್ನ ತಂದೆ ವಾದಿ ತಂಗಿ ಮನೆಯಲ್ಲಿ ವಾಸವಿದ್ದರು ನನ್ನ ಮನೆಯಲ್ಲಿ ವಾಸವಿರಲಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿರುವ ಕಾರಣ ನಿ.ಡಿ-3 ರ ಪ್ರಕಾರ ನನ್ನ ತಂದೆ ವ್ಯವಸ್ಥಾ ಪತ್ರ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಯುವ

ಮುಂಚೆ ಬುದ್ಧಿ ಸ್ಥಿಮಿತತೆಯಲ್ಲಿರಲಿಲ್ಲ ಎಂದರೆ ಸುಳ್ಳು. ನನ್ನ ತಂದೆ ಮದ್ಯ ನಶೆಯಲ್ಲಿ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವ್ಯವಸ್ಥಾ ಪತ್ರ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸುಳ್ಳು. ನನ್ನ ತಂದೆ ನನ್ನ ಮನೆಗೆ ಬಂದು ವಾಸ ಇರಲಿಲ್ಲ ಭೂತನಹಳ್ಳಿಯಲ್ಲಿ ಇರುತ್ತಿದ್ದರು ಎಂದರೆ ಸುಳ್ಳು. ವಾದಿ ಯಾವ ಯಾವ ಸರ್ವೆ ನಂಬರ್ ಮತ್ತು ಅವುಗಳ ಷೆಡ್ಯೂಲ್ ಬಿಟ್ಟು ಕೇಸು ಹಾಕಿದ್ದಾರೆ ಎಂದು ನನ್ನ ಪ್ರಮಾಣ ಪತ್ರ ಮತ್ತು ಲಿಖಿತ ಹೇಳಿಕೆಯಲ್ಲಿ ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರ ಮತ್ತು ಲಿಖಿತ ಹೇಳಿಕೆಯಲ್ಲಿ ಯಾವ ಅಂಶವನ್ನು ಪ್ರಸ್ತಾವನೆ ಮಾಡಿಲ್ಲ ಎಂದರೆ ಸುಳ್ಳು.

ಕಂಪಲಾಪುರದ ಆಸ್ತಿಯನ್ನು ಎಷ್ಟು ಮೊತ್ತಕ್ಕೆ ಖರೀದಿಸಿದ್ದರು ಎಂದರೆ ಮರೆತು ಹೋಗಿದೆ. ದಾವಾ ಆಸ್ತಿಯನ್ನು ಖರೀದಿಸುವಷ್ಟು ಹಣ ನನ್ನ ತಂದೆಯ ಬಳಿ ಇತ್ತು ಎಂದು ತೋರಿಸಲು ದಾಖಲೆ ಇರುವುದಿಲ್ಲ ಆದರೆ ನನ್ನ ತಂದೆ ಭೂತನಹಳ್ಳಿ ಆಸ್ತಿ ಮಾರಾಟ ಮಾಡಿ ಇಟ್ಟುಕೊಂಡಿದ್ದರು. ಭೂತನಹಳ್ಳಿಯಲ್ಲಿದ್ದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸುಳ್ಳು. ಭೂತನಹಳ್ಳಿಯಲ್ಲಿ ನನ್ನ ತಂದೆಗೆ ಇದ್ದ ಮನೆ ಮಾತ್ರ ಪಿತ್ರಾರ್ಜಿತ ಆಸ್ತಿಯಾಗಿತ್ತು. ನನ್ನ ತಂದೆಗೆ ಒಟ್ಟು 4 ಎಕರೆಗಿಂತ ಜಾಸ್ತಿ ಸ್ವಯಾರ್ಜಿತ ಆಸ್ತಿ ಇತ್ತು. ಅದರ ಪೈಕಿ 2 ಎಕರೆ 26 ಗುಂಟೆಯನ್ನು ನನ್ನ ತಂದೆ ಖರೀದಿಸಿದ್ದರು. ಉಳಿದ ಆಸ್ತಿ ಸರ್ಕಾರದಿಂದ ಮಂಜೂರಾಗಿತ್ತು. ತನ್ನ ಆಸ್ತಿ ಯಾರು ಯಾರಿಗೆ ಸೇರಬೇಕೆಂದು ನನ್ನ ತಂದೆ ನೊಂದಣಿ ಪತ್ರ ಬರೆದಿಲ್ಲ. ಯಾವುದೇ ನೊಂದಣಿ ದಾಖಲೆಯನ್ನು ಬರೆಯದಿದ್ದಲ್ಲಿ ಸರ್ಕಾರದಿಂದ ಮಂಜೂರಾದ ಆಸ್ತಿ ಮಂಜೂರಿದಾರರ ಮರಣಾನಂತರ ಅವರ ಕುಟುಂಬಸ್ಥರಿಗೆ ಸೇರಬೇಕೆಂದರೆ ಸುಳ್ಳು. ನನ್ನ ತಂದೆ ಸಾಯುವ ಮೊದಲೇ ಮಾರಾಟ ಮಾಡಿದ್ದರು.

ನನ್ನ ಅಣ್ಣ ಕಾಳೇಗೌಡ ಆಸ್ತಿ ಖರೀದಿಸುವ ಕಾಲಕ್ಕೆ ಅವರ ಹೆಸರಿನಲ್ಲಿ ಆರ್.ಟಿ.ಸಿ ಇರಬೇಕಾಗಿತ್ತು ಎಂದರೆ ಯಾವುದೇ ಆಸ್ತಿ ಖರೀದಿಸಿಲ್ಲ ಮನೆ ಭೋಗ್ಯ ಮಾಡಿ ಖರೀದಿಸಿದ್ದೇವೆ.

ಮನೆಯ ಅಸೆಸ್ ಮೆಂಟ್ ನಂಬರ್ ಗೊತ್ತಿಲ್ಲ ಆದರೆ ಮನೆ ನಂಬರ್ 54 ವಿಸ್ತೀರ್ಣ 100X25 ಅಡಿಗಳು ವಿಸ್ತೀರ್ಣ ಇತ್ತು. ಭೋಗ್ಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಿ.ಡಿ–16 ರಲ್ಲಿದ್ದ ಸ.ನಂ.61/4 ರ ಆಸ್ತಿ ನಮ್ಮ ಅಣ್ಣನಿಗೆ ಸೇರಿರಲಿಲ್ಲ ಎಂದರೆ ಸುಳ್ಳು ವ್ಯವಸ್ಥಾ ಪತ್ರದ ಪ್ರಕಾರ ಅವರಿಗೆ ಸೇರಿದೆ. ಸ.ನಂ.61/4 ರ ಆಸ್ತಿಯನ್ನು ನನ್ನ ತಾಯಿ ಜೀವನಾಂಶಕ್ಕಾಗಿ ಬಿಟ್ಟಿತ್ತು ಎಂದರೆ ಸುಳ್ಳು. ಭೂತನಹಳ್ಳಿ ಸ.ನಂ.64/3, 10/2 ರ ಆಸ್ತಿಗಳನ್ನು ನನ್ನ ತಾಯಿ ಜೀವನಾಂಶಕ್ಕಾಗಿ ಬಿಡಲಾಗಿದೆ. ನನ್ನ ತಾಯಿಯ ಹೆಸರಿಗೂ ಖಾತೆಯಾಗಿದೆ. ನನ್ನ ತಾಯಿ ಜೀವನಾಂಶಕ್ಕಾಗಿ ಬಿಟ್ಟಿರುವ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಜೀವನಾಂಶಕ್ಕಾಗಿ ಬಿಟ್ಟಿರುವ ಆಸ್ತಿಗಳ ಬಗ್ಗೆ ಬರವಣಿಗೆಯಾಗಿಲ್ಲ ಆರ್.ಟಿ.ಸಿ., ಆಗಿದೆ.

ಸ.ನಂ.10/2 ರ ಜಮೀನನ್ನು ನಂದಿನಾಥಪುರ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಆಧಾರ ಮಾಡಿದ್ದಾರೆ ಎಂದರೆ ಸರಿ. ಕಂಪಲಾಪುರದ ಆಸ್ತಿ ಬಿಟ್ಟರೆ ಬೇರೆ ಯಾವುದೇ ಜಮೀನು ಇರುವುದಿಲ್ಲ. ನನ್ನ ಅಣ್ಣ ಮತ್ತು ತಮ್ಮನಿಗೆ ಆಸ್ತಿ ಕೊಟ್ಟಿದ್ದಾರೆ ವಾದಿಗೆ ಕೊಟ್ಟಿಲ್ಲ. ವಾದಿಗೆ ಆಸ್ತಿ ಕೊಡದಿದ್ದ ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಭಾಗಾಂಶ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ, ಅವರ ಅಧಿಕಾರವನ್ನು ಮೊಟಕುಗೊಳಿಸಲು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**